ಸರಬರಾಜು ಯೋಜನೆ ಮತ್ತು 136 ಕೈಪಂಪು ಕೊಳವೆಬಾವಿ ಕಾಮಗಾರಿಗಳ ಕೆಲಸವು ಪ್ರಗತಿಯಲ್ಲಿದೆ.

ಈ ವರ್ಷದಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ಕುಡಿಯುವ ನೀರಿನ ಸಲುವಾಗಿ ರೂ. 30.02 ಲಕ್ಷ ಅನುದಾನವನ್ನು ಬಿಡುಗಡೆ ಮಾಡಿದೆ.

**ಬಾದಾಮಿ ತಾಲ್ಲೂಕಿನಲ್ಲಿರುವ ಪಶು ಚಿಕಿತ್ಸಾ ಕೇಂದ್ರಗಳು**

708 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಬಾದಾಮಿ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಎಷ್ಟು ಪಶು ಚಿಕಿತ್ಸಾ ಕೇಂದ್ರಗಳಿಗೆ ಮಂಜೂರಾತಿ ನೀಡಲಾಗಿದೆ; (ಪ್ರಾರಂಭವಾದ ತಿಂಗಳು - ವರ್ಷ)*

*ಆ) 1996-97ರಲ್ಲಿ ಜನರ ಬೇಡಿಕೆ ಅನ್ವಯ ಹಾಗೂ ಇಲಾಖೆಯ ಅವಶ್ಯಕತೆ ಅನುಗುಣವಾಗಿ ನೀರಲಕೇರಿ, ನೀಲಗುಂದ ಗ್ರಾಮಗಳಿಗೆ ಆಸ್ಪತ್ರೆಗಳನ್ನು ಮಂಜೂರಾತಿ ನೀಡಲಾಗುವುದೇ?*

ಶ್ರೀ ಬಿ.ಎನ್. ಬಚ್ಚೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು) :

ಅ) 16

ವಿವರ ಈ ಕೆಳಕಂಡಂತೆ ಇರುತ್ತವೆ

| ಸಂಸ್ಥೆ ಹೆಸರು | | ಪ್ರಾರಂಭವಾದ | |
|---|---|---|---|
| | | ತಿಂಗಳು | ವರ್ಷ |
| **ಪಶು ಆಸ್ಪತ್ರೆ :** | | | |
| 1) | ಬಾದಾಮಿ | - | 1938 |
| 2) | ಗುಡೇದ ಗುಡ್ಡ | - | 1961 |
| 3) | **ಪಶು ಚಿಕಿತ್ಸಾಲಯ:** | | |
| 3) | ಕೆರೂರ | - | 1948 |
| 4) | ಬಿ. ಜಾಲಿಹಾಳ | ಮಾರ್ಚ್ | 1990-91 |
| **ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ** | | | |
| 5) | ಕಟಗೇರಿ | ಮಾರ್ಚ್ | 1984 |
| 6) | ನಂದಿಕೇಶ್ವರ | ಮಾರ್ಚ್ | 1956 |
| 7) | ಕುಳಗೇರಿ ಕ್ರಾಸ್ | ಮಾರ್ಚ್ | 1956 |
| 8) | ಅನವಾಲ | ಮಾರ್ಚ್ | 1991 |
| 9) | ಹಲಕುರ್ಕಿ | ಫೆಬ್ರವರಿ | 1992 |
| 10) | ಹುಬ್ಬಳ್ಳಿ | ಮಾರ್ಚ್ | 1993 |
| 11) | ಕೆಲವಡಿ | ಮೇ | 1994 |
| 12) | ಬೊಳಚಗುಡ್ಡ | ಏಪ್ರಿಲ್ | 1994 |

| | | | |
|---|---|---|---|
| 13) | ಯಂಕಚಿಮಣಿನಾಗರ | ಏಪ್ರಿಲ್ | 1994 |
| 14) | ಕಾಕನೂರ | ಆಗಸ್ಟ್ | 1995 |
| 15) | ನೀರಬೂದಿಹಾಳ | ಆಗಸ್ಟ್ | 1995 |
| 16) | ಕಾಗಲಗೊಂಬ | ಆಗಸ್ಟ್ | 1995 |

ಅ) ಬೇಡಿಕೆ ಬಂದಲ್ಲಿ ಸದರಿ ಗ್ರಾಮಗಳಿಗೆ 1996-97ನೇ ಸಾಲಿನಲ್ಲಿ ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

**ಬಾದಾಮಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ**

709 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬಾದಾಮಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯಾತ್ಮಕ ಹಳ್ಳಿಗಳಿಗೆ ರ. 20.00 ಲಕ್ಷ ರೂಪಾಯಿಗಳ ವಿಶೇಷ ಅನುದಾನ ಬಿಡುಗಡೆ ಮಾಡಲು ಸರ್ಕಾರ ಒಪ್ಪಿದೆಯೇ?*

ಆ) *ಮಂತ್ರಿಗಳ ಆದೇಶದಂತೆ ಜಿಲ್ಲಾ ಪಂಚಾಯತಿಯವರು ಕಳುಹಿಸಿರುವ ಪ್ರಸ್ತಾವನೆಗೆ ಸರ್ಕಾರ ಶೀಘ್ರವಾಗಿ ಮಂಜೂರಾತಿ ನೀಡಿ, ಕೆಲಸ ಪ್ರಾರಂಭಿಸುತ್ತದೆಯೇ?*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಮತ್ತು ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ, ಜಿಲ್ಲಾ ಪಂಚಾಯತ್, ಬಿಜಾಪುರ ಇವರು ಕಳಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

**ಆರ್.ಇ.ಪಿ. ಸ್ಕೀಮ್‌ನಲ್ಲಿ ಭಟ್ಕಳ ತಾಲ್ಲೂಕಿನ ವಿದ್ಯುತ್ತೀಕರಣದ ಕುರಿತು**

711 - ಶ್ರೀ ಡಾ|| ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕೇಂದ್ರ ಸರ್ಕಾರದ ಆರ್.ಇ.ಪಿ. ಸ್ಕೀಮ್‌ನ ಅನ್ವಯ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿಗೆ ಮಂಜೂರಾದ ಹಣವೆಷ್ಟು? ಎಷ್ಟು ಹಣ ಖರ್ಚಾಗಿದೆ?*

ಆ) *ಗ್ರಾಮಾಂತರದಲ್ಲಿರುವ ಮಜರ್‌ಗಳಿಗೆ (ಹಾಮ್ಲೆಟ್ ಎಲೆಕ್ಟ್ರಿಫಿಕೇಷನ) ವಿದ್ಯುತ್ ಪೂರೈಸಲು ಈ ಯೋಜನೆಯನ್ವಯ ಅಂದಾಜು ಪತ್ರಗಳನ್ನು ಸಿಬ್ಬಂದಿ ಕೊರತೆಯಿಂದಾಗಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಕೈಗೊಂಡ ಕ್ರಮಗಳೇನು?*

ಶ್ರೀ ಹೆಚ್.ಕೆ. ಪಾಟೀಲ್ (ಉಪಮುಖ್ಯ ಮಂತ್ರಿಗಳು) :

ಅ) ಭಟ್ಕಳ ತಾಲ್ಲೂಕಿನಲ್ಲಿ ಆರ್.ಇ.ಪಿ. ಸ್ಕೀಮ್‌ನಲ್ಲಿ ಮಜರೆಗಳ ವಿದ್ಯುದ್ದೀಕರಣಕ್ಕಾಗಿ ರೂ. 113.53 ಲಕ್ಷದ ಅಂದಾಜು ವೆಚ್ಚದ ಒಂದು ಹೊಸ ಯೋಜನೆಯನ್ನು ರೂಪಿಸಿ ಅದನ್ನು ಮಂಜೂರಾತಿಗಾಗಿ ಗ್ರಾಮೀಣ ವಿದ್ಯುದ್ದೀಕರಣ ನಿಗಮ, ದೆಹಲಿರವರಿಗೆ ಕಳುಹಿಸಿದ್ದು ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ.